ಪಾಠ 9 ಆಗಸ್ಟ್ 25-31

# ಎರಡನೇಯ ಸುವಾರ್ತೆಯ ಪ್ರಯಾಣ



## ಸಬ್ಬತ್ತಿನ ಮಧ್ಯಾಹ್ನ:

**ಈ ವಾರದ ಪಾಠದ ಅಧ್ಯಯನಕ್ಕಾಗಿ:** ಅ.ಪೋ.ಕೃ 16, ರೋಮ 3:28, ಗಲಾತಿ 2:16, ಅ.ಪೋ.ಕೃ 17, 1 ಕೊರಿಂಥ 1:23, ಅ.ಪೋ.ಕೃ 18:1-10.

**ಸ್ಮರಣ ವಾಕ್ಯ: "ಇದಲ್ಲದೆ ಕರ್ತನು ರಾತ್ರಿಯಲ್ಲಿ ಪೌಲನಿಗೆ ದರ್ಶನ ಕೊಟ್ಟು--ನೀನು ಹೆದರಬೇಡ; ಸುಮ್ಮನಿರದೆ ಮಾತ ನಾಡುತ್ತಲೇ ಇರು. ನಾನೇ ನಿನ್ನೊಂದಿಗಿದ್ದೇನೆ; ಯಾರೂ ನಿನ್ನ ಮೇಲೆ ಬಿದ್ದು ಕೇಡುಮಾಡುವದಿಲ್ಲ; ಈ ಪಟ್ಟಣದಲ್ಲಿ ಬಹಳ ಮಂದಿ ನನಗೆ ಇದ್ದಾರೆ ಎಂದು ಹೇಳಿದನು." (ಅ.ಪೋ.ಕೃ 18:9,10).**

ಅಂತಿಯೋಕ್ಯದಲ್ಲಿ ಪೌಲನು ಮತ್ತು ಬರ್ನಬಾಸನು ಸಭೆಯನ್ನು ಉತ್ತಮವಾಗಿ ಬೆಳೆಸಿ ಅದನ್ನು ಸುವಾರ್ತೆಯ ಕೆಲಸದಲ್ಲಿ ತೊಡಗುವಂತೆ ಮಾಡಿದರು. ಈ ಕೆಲಸದಲ್ಲಿ ಮಾತ್ರ ಅವರು ಕೊನೆಯ ಬಾರಿಗೆ ಸೇರಿ ಕೆಲಸ ಮಾಡಿದ್ದರು. ಇದರ ನಂತರ ಅವರು ಒಂದು ತೀಕ್ಷ್ಣವಾದ ವಾಗ್ವಾದಕ್ಕೆ ಇಳಿದು ಬೇರ್ಪಟ್ಟರು. ಪೌಲನು ಮತ್ತು ಬರ್ನಬಾಸನು ಬೇರ್ಪಡಲು ಕಾರಣ ಮಾರ್ಕನು. ಇವನು ಬರ್ನಬಾಸನ ಸಹೋದರಿಯ ಮಗನಾಗಿದ್ದನು. *(ಕೊಲೊಸ್ಸೆ 4:10)*

ಪೌಲನು ಬರ್ನಬಾಸನನ್ನು ತಾವು ಈ ಹಿಂದೆ ಸುವಾರ್ತೆಯನ್ನು ಸಾರಿದ ಪ್ರದೇಶಕ್ಕೆ ಹೋಗೋಣವೆಂದು ಆಹ್ವಾನಿಸಿದಾಗ ಬರ್ನಬಾಸನು ತನ್ನ ಸಹೋದರಿಯ ಮಗನನ್ನು ತನ್ನ ಜೊತೆಗೆ ಕರೆದುಕೊಂಡು ಹೋಗಲು ಬಯಸಿದನು. ಆದರೆ ಪೌಲನು ಇದನ್ನು ವಿರೋಧಿಸಿದನು ಯಾಕೆಂದರೆ ಈ ಹಿಂದೆ ಮಾರ್ಕನು ಅವರನ್ನು ನಿರಾಶೆ ಪಡಿಸಿದ್ದನು. *(ಅ.ಪೋ.ಕೃ 13:13)*. ಪೌಲನು ಮತ್ತು ಬರ್ನಬಾಸನು ಬೇರೆಯಾಗಿದ್ದು ಒಂದು ಆಶೀರ್ವಾದವಾಗಿ ಬದಲಾಯಿತು. ಇವರು ಬೇರ್ಪಡುವುದರ ಮೂಲಕ ಅವರು ಹೆಚ್ಚಿನ ಸ್ಥಳಗಳನ್ನು ತಲುಪಲು ಸಾಧ್ಯವಾಯಿತು.

ಬರ್ನಬಾಸನು ಮಾರ್ಕನನ್ನು ಕರೆದುಕೊಂಡು ಅವನ ಸ್ವಂತ ಊರಾದ ಕುಪ್ರಕ್ಕೆ ಹಿಂತಿರುಗಿದನು *(ಅ.ಪೋ.ಕೃ 4:36).*

ಸೀಲನನ್ನು ತನ್ನ ಜೊತೆಗೆ ಬರಬೇಕೆಂದು ಆಹ್ವಾನಿಸಿದ್ದ ಪೌಲನು ಸಿರಿಯಾ ಮತ್ತು ಸಿಸಿಲಿಯಾ ಪ್ರಾಂತ್ಯಕ್ಕೆ ಹೋಗಿ ಅಲ್ಲಿರುವ ಸಭೆಗಳನ್ನು ಬಲಪಡಿಸಿದನು. ಮೊದಲ ಬಾರಿಗೆ ಅಂತಿಯೋಕ್ಯಕ್ಕೆ ಬರುವ ಮುನ್ನ ತಾರ್ಷಸಿನಲ್ಲಿ ಅನೇಕ ವರ್ಷಗಳನ್ನು ಕಳೆದನು *(ಅ.ಪೋ.ಕೃ 9:39; 11:25,26).* ಈ ಮುಂಚೆ ತಾನು ಸ್ಥಾಪಿಸಿದ್ದ ಸಭೆಗಳನ್ನು ಬಲಪಡಿಸುವುದಕ್ಕೆ ಅವನಿಗೆ ಒಂದು ಅವಕಾಶ ಸಿಕ್ಕಿತು. ಪೌಲನು ತಾನು ಮೊದಲು ಯೋಚಿಸಿದ್ದಕ್ಕಿಂತ ದೇವರು ಅವನ ಜೀವನದ ಕುರಿತಾಗಿ ಹೆಚ್ಚಿನ ಯೋಜನೆಯನ್ನು ಹಾಕಿಕೊಂಡಿದ್ದನು.

**ಭಾನುವಾರ** **ಆಗಸ್ಟ್ 26**

## ಮತ್ತೆ ಲುಸ್ತ್ರದಲ್ಲಿ

ಲೂಕನು ಕೆಲವು ಘಟನೆಗಳನ್ನು ಮಾತ್ರ ಆಯ್ಕೆ ಮಾಡಿಕೊಂಡು ಬರೆಯುವ ವಿಧಾನದಲ್ಲಿ ಪೌಲನು ನೇರವಾಗಿ ದರ್ಬೆ ಮತ್ತು ಲೂಸ್ತ್ರಕ್ಕೆ ಬಂದು ಸೇರುತ್ತಾನೆ. ಸಿರಿಯಾ ಮತ್ತು ಸಿಸಿಲಿಯಾ ಪ್ರಾಂತ್ಯಗಳನ್ನು ಪೌಲನು ಹಾದು ಹೋಗುತ್ತಾ ಅಲ್ಲಿರುವ ಸಭೆಗಳನ್ನು ಬಲಪಡಿಸುತ್ತಾನೆ*(ಅ.ಪೋ.ಕೃ 15:41*).

**ಅ.ಪೋ.ಕೃ 16:1-13 ನ್ನು ಓದಿರಿ. ಬೇರೆಯವರನ್ನು ತಲುಪಲು ಪೌಲನಿಗೆ ಇದ್ದ ಕಾಳಜಿಯನ್ನು ನೋಡಿದಾಗ ಇದರಿಂದ ನಾವು ಕಲಿಯುವ ಪಾಠವೇನು?**

__________________________________________________________

__________________________________________________________

ತಿಮೊಥಿಯ ತಂದೆಯು ಅನ್ಯನಾಗಿದ್ದರೂ ಕೂಡ, ಅವನ ತಾಯಿಯು ಯೆಹೂದ್ಯ ಕ್ರೈಸ್ತಳಾಗಿದ್ದಳು, ಆಕೆಯ ಹೆಸರು ಯುನಿಸ್. ತಿಮೋಥಿಗೆ ಸುನ್ನತಿಯಿಲ್ಲದಿದ್ದರೂ ಕೂಡ ಬಾಲ್ಯದಿಂದಲೂ ಕೂಡ ಅವನಿಗೆ ಸತ್ಯವೇದದ ಜ್ಞಾನವಿತ್ತು *(2 ತಿಮೋಥಿ 3:15).* ಒಬ್ಬ ಕ್ರೈಸ್ತನಾಗಿ ಅವನು ಈಗಾಗಲೇ ಸ್ಥಳೀಯ ವಿಶ್ವಾಸಿಗಳ; ಓ ಒಳ್ಳೆಯ ಹೆಸರನ್ನು ಮತ್ತು ಮರ್ಯಾದೆಯನ್ನು ಸಂಪಾದಿಸಿಕೊಂಡಿದ್ದನು.

ಯೆಹೂದ್ಯರು ತಾಯಿಯ ವಂಶಾವಳಿಯನ್ನು ಗಣನೆಗೆ ತೆಗೆದುಕೊಳ್ಳುದ ಕಾರಣಕ್ಕಾಗಿ ತಿಮೋಥಿಯು ಎಂಟನೆಯ ದಿನದಲ್ಲಿ ಸುನ್ನತಿ ಮಾಡಿಸಿಕೊಂಡಿರಲಿಲ್ಲ. ಯಾಕೆಂದರೆ ಆತನ ತಂದೆ ಒಬ್ಬ ಗ್ರೀಕ್ ಹಿನ್ನಲೆಯುಳ್ಳವನಾಗಿದ್ದನು. ಅವನ ಪ್ರಕಾರ ಸುನ್ನತಿಯು ಒಂದು ಕ್ರೂರವಾದ ಕಾರ್ಯವಾಗಿತ್ತು.

ತಿಮೋಥಿಯನ್ನು ತನ್ನ ಜೊತೆ ಕೆಲಸಗಾರನಾಗಿ ಕರೆದುಕೊಂಡು ಹೋಗಲು ಪೌಲನು ಬಯಸಿದ್ದರಿಂದ ಯೆಹೂದ್ಯರು ಸುನ್ನತಿಯಿಲ್ಲದವರನ್ನು ಸಭಾಮಂದಿರದೊಳಕ್ಕೆ ಪ್ರವೇಶಿಸಲು ಅಭ್ಯಂತರ ಪಡಿಸುತ್ತಾರೆ ಎಂದು ತಿಳಿದು ಪೌಲನು

ಅವನಿಗೆ ಸುನ್ನತಿಯನ್ನು ಮಾಡಿಸಿದನು. ಈ ರೀತಿ ಮಾಡುವುದು ರಾಜಕೀಯ ಉದ್ದೇಶವಾಗಿದ್ದರೂ ಕೂಡ ಸುವಾರ್ತೆಗೆ ಇದರಿಂದ ಅಡ್ಡಿಯಾಗಬಾರದೆಂದು ಈ ಎಚ್ಚರಿಕೆಯನ್ನು ವಹಿಸಿದನು.

ತನ್ನ ಮೊದಲನೇಯ ಸುವಾರ್ತೆ ಪ್ರಯಾಣದಲ್ಲಿ ಸ್ಥಾಪಿಸಿದ ಸಭೆಗಳನ್ನು ಮತ್ತೆ ದರ್ಶಿಸಿಕೊಂಡು ದಕ್ಷಿಣ ದಿಕ್ಕಿಗೆ ಪ್ರಯಾಣ ಬೆಳೆಸಿದನು. ಪ್ರಾಯಶಃ ಎಫೆಸದ ಕಡೆಗೆ ಹೊರಟನು ಇದು ಏಷ್ಯಾ ಪ್ರಾಂತ್ಯದಲ್ಲಿತ್ತು, ಆದರೆ ಪರಿಶುದ್ಧಾತ್ಮನು ಇದನ್ನು ತಡೆದನು. ಆಗ ಅವನು ಉತ್ತರದ ಕಡೆಗೆ ಹೊರಟು ಬಿಥಾನಿಯ ಕಡೆಗೆ ಹೋದನು.ಆದರೆ ಅಲ್ಲಿಯೂ ಕೂಡ ಪರಿಶುದ್ಧಾತ್ಮನು ಅವನನ್ನು ತಿಳಿಯದ ರೀತಿಯಲ್ಲಿ ತಡೆದನು. ಯಾಕೆಂದರೆ ಅವನು ಈಗಾಗಲೇ ಮೆಸಿಯಾ ಪ್ರಾಂತ್ಯವನ್ನು ದಾಟಿ ಹೋಗಿದ್ದನು. ಪೌಲನಿಗೆ ಇದ್ದ ಒಂದು ದಾರಿಯೆಂದರೆ ಪಶ್ಚಿಮಕ್ಕೆ ಪ್ರಯಾಣ ಬೆಳೆಸಿ ತ್ರೋವದ ಸಮುದ್ರ ತೀರವನ್ನು ತಲುಪುವದು. ಅಲ್ಲಿಂದ ಅವನು ಅನೇಕ ಮಾರ್ಗಗಳನ್ನು ತಲುಪಬಹುದಾಗಿತ್ತು.
ರಾತ್ರಿಯ ಕನಸಿನಲ್ಲಿ ದೇವರು ಕಾಣಿಸಿಕೊಂಡು ಮಕೆದೋನ್ಯಕ್ಕೆ ಮೂಲಕವಾಗಿ ಹಾದು ಹೋಗಬೇಕು ಎಂದು ಹೇಳಿದನು. ಇದನ್ನು ಮನಗಂಡ ಆತನ ಜೊತೆಗಾರರು ದೇವರು ಮಕೆದೋನ್ಯಯದವರಿಗೆ ಸುವಾರ್ತೆಯನ್ನು ಸಾರುವುದಕ್ಕಾಗಿ ಪೌಲನಿಗೆ ಆದೇಶ ನೀಡಿದ್ದಾರೆ ಎಂದು ಭಾವಿಸಿದರು.

**ಪೌಲನು ತಿಮೋಥಿಗೆ ಸುನ್ನತಿ ಮಾಡಿಸಿದರ ಕುರಿತಾಗಿ ಆಲೋಚಿಸಿರಿ. ಕೆಲವು ಸಂದರ್ಭಗಳಲ್ಲಿ ಅವಶ್ಯಕತೆಯಿಲ್ಲದಿದ್ದರೂ ಕೂಡ ಸಮಸ್ಯೆಗಳನ್ನು ದೂರ ಮಾಡಲು ತೀರ್ಮಾನಗಳನ್ನು ತೆಗೆದುಕೊಳ್ಳುವುದು ನಮ್ಮ ಅಭಿಪ್ರಾಯಕ್ಕಿಂತ ಸುವಾರ್ತೆಗೆ ಹೇಗೆ ಸಹಾಯವಾಗುತ್ತದೆ?**

**ಸೋಮವಾರ** **ಆಗಸ್ಟ್ 27**

## ಫಿಲಿಪ್ಪಿ

ಒಮ್ಮೆ ಮೇಸಿದೊನಿಯಕ್ಕೆ ಬಂದ ನಂತರ ಪೌಲನು ಅವನ ಜೊತೆಗಾರರು ಫಿಲಿಪ್ಪಿಗೆ ಪ್ರಯಾಣ ಬೆಳೆಸಿದರು. ಈ ಮೂಲಕ ಅವರು ಯುರೋಪ್ ನಲ್ಲಿ ಮೊದಲ ಕ್ರೈಸ್ತ ಸಭೆಯನ್ನು ಫಿಲಿಪ್ಪಿಯಲ್ಲಿ ಸ್ಥಾಪಿಸಿದರು.

**ಅ.ಪೋ.ಕೃ 16:11-24 ನ್ನು ಓದಿರಿ. ಸುವಾರ್ತಿಕರು ಸಬ್ಬತ್ ದಿನದಲ್ಲಿ ಎಲ್ಲಿಗೆ ಹೋದರು ಮತ್ತು ಯಾಕೆ?ಅಲ್ಲಿ ಅಂತಿಮವಾಗಿ ಅಲ್ಲಿ ಏನು ನಡೆಯಿತು.**

__________________________________________________

__________________________________________________

ಪೌಲನು ಎಲ್ಲಿಗೆ ತಲುಪಿದರೂ ಕೂಡ ಮೊದಲು ಸ್ಥಳೀಯ ಸಭಾಮಂದಿರಕ್ಕೆ ಹೋಗುವುದು ಅವನ ವಾಡಿಕೆಯಾಗಿತ್ತು ಇದರ ಮೂಲಕ ಅಲ್ಲಿರುವ ಯೆಹೂದ್ಯರನ್ನು ತಲುಪುವುದು ಅವನ ಉದ್ದೇಶವಾಗಿತ್ತು. *(ಅ.ಪೋ.ಕೃ 13:14, 42, 44; 17:1,2; 18:4).*ಫಿಲಿಪ್ಪಿಯಲ್ಲಿ ಪೌಲನು ಮತ್ತು ಅವನ ಜೊತೆಯಲ್ಲಿದ್ದವರು ನದಿಯ ತೀರದಲ್ಲಿ

ನಡೆಯುತ್ತಿದ್ದ ಪ್ರಾರ್ಥನೆ ಕೂಟಕ್ಕೆ ಹಾಜರಾದರು ಅಲ್ಲಿ ಕೆಲವು ಸ್ತ್ರೀಯರು ಮತ್ತು ಪುರುಷರು ಸೇರಿದ್ದರು ಬಹುಶಃ ಆ ಪಟ್ಟಣದಲ್ಲಿ ದೇವಾಲಯವಿರಲಿಲ್ಲ. ಇದರಿಂದ ಪೌಲನು ಸಬ್ಬತ್ ದಿನದಲ್ಲಿ ಯೆಹೂದ್ಯರ ಸಭಾಮಂದಿರಕ್ಕೆ ಕೇವಲ ಸುವಾರ್ತೆಯ ಉದ್ದೇಶಕ್ಕಾಗಿ ಹೋಗಲಿಲ್ಲ ಬದಲಿಗೆ ಅದು ಆರಾಧನೆಯ ದಿನವಾಗಿತ್ತು.

**ಅ.ಪೋ.ಕೃ 16:25-34 ನ್ನು ಓದಿರಿ. ಸೆರೆ ಅಧಿಕಾರಿಯ ಮಾನಸಾಂತರದ ಕಥೆಯನ್ನು ಮತ್ತೆ ಓದಿರಿ. ಅವನು ರಕ್ಷಣೆ ಹೊಂದಲು ಏನು ಮಾಡಬೇಕಾಯಿತು?**

____________________________________________________________

____________________________________________________________

ಪೌಲ ಮತ್ತು ಸೀಲರು ಸೆರೆಮನೆಯ ಯಜಮಾನನ ಪ್ರಶ್ನೆಗೆ ಕೊಟ್ಟ ಉತ್ತರವು ಸುವಾರ್ತೆಯ ಅನುಸಾರವಾಗಿತ್ತು, ಯಾಕೆಂದರೆ ರಕ್ಷಣೆಯು ಕೇವಲ ಯೇಸುವಿನ ಮೇಲಿನ ನಂಬಿಕೆಯಿಂದ ಮಾತ್ರ ಬರುತ್ತಿತ್ತು *(ರೊಮ3:28, ಗಲಾತಿ 2:16)*ಈ ಸನ್ನಿವೇಶದಲ್ಲಿ ನಾವು ಗಮನಿಸಲಾಗದ ಒಂದು ವಿಷಯವೆಂದರೆ ಯೇಸುವಿನ ಮೇಲಿನ ನಂಬಿಕೆಯು ಮಾತ್ರ ದೀಕ್ಷಾಸ್ನಾನಕ್ಕೆ ಸಾಕುಗುತ್ತದೆಯೋ. ಅವರಿಗೆ ಸತ್ಯವೇದದ ಅಧ್ಯಯನ ಮತ್ತು ಸಿದ್ಧಾಂತಗಳ ಕುರಿತಾದ ಜ್ಞಾನವು ಕೂಡ ಅವಶ್ಯಕವಲ್ಲವೇ?

ಸೆರೆಮನೆಯ ಯಜಮಾನನ ಕುರಿತಾಗಿ ನಮಗೆ ಏನು ತಿಳಿದಿದೆ?ಅವನು ಯೆಹೂದ್ಯನೆ ಅಥವಾ ಯೆಹೂದ್ಯ ಹಿನ್ನಲೆಯುಳ್ಳವನೇ? ಈ ಎರಡೂ ವಿಧಾನಗಳಲ್ಲಿಯೂ ಕೂಡ ಅವನು ಯೇಸುವನ್ನು ರಕ್ಷಕ ಮತ್ತು ದೇವರೆಂದು ನಂಬಬೇಕು. ಹಾಗಾದರೆ ಒಂದು ವೇಳೆ ಒಬ್ಬ ಅನ್ಯನು ದೇವರ ಕುರಿತಾಗಿ ತಿಳಿದುಕೊಂಡಿದ್ದರೆ ಕೊರ್ನೇಲಿಯ, ಲಿಡಿಯಾಳ ಹಾಗೆ *(ಅ.ಪೋ.ಕೃ 16:14)*. ಅ.ಪೋ.ಕೃ ಗಳಲ್ಲಿ ಇನ್ನೂ ಅನೇಕರನ್ನು ನಾವು ನೋಡಬಹುದು? ಒಂದು ವೇಳೆ ಅವನು ಪೌಲನು ಪಟ್ಟಣದಲ್ಲಿ ನಡೆಸಿದ ಸುವಾರ್ತೆಯ ಕೂಟಗಳಿಗೆ ಹಾಜರಾಗಿದ್ದರೆ? ಅವನ ಕುರಿತಾಗಿ ವಿಚಾರಗಳು ಏನೇ ಆಗಿದ್ದರೂ ಕೂಡ ಈ ಸನ್ನಿವೇಶವನ್ನು ಸರಿಯಾದ ರೀತಿಯಲ್ಲಿ ತರಬೇತಿಯನ್ನು ನೀಡದೆ ತಕ್ಷಣವಾಗಿ ಕೊಡುವ ದೀಕ್ಷಾಸ್ನಾನಕ್ಕೆ ಸಮರ್ಥನೆಯಾಗಿ ಉಪಯೋಗಿಸಬಾರದು.

**ಅ.ಪೋ.ಕೃ 16:31-34 ನ್ನು ಓದಿರಿ. ಯೇಸುವಿನ ತ್ಯಾಗವು ನಮಗೆ ಎಷ್ಟು ಮುಖ್ಯ ಮತ್ತು ಅವಶ್ಯಕತೆ ಎಂಬುದನ್ನು ಇದು ತಿಳಿಸುತ್ತದೆ. ರಕ್ಷಣೆಗೆ ಬೇಕಾದ ಎಲ್ಲಾ ನಿರೀಕ್ಷೆಯನ್ನು ನೀಡುವ ಯೇಸುವಿನ ನೀತಿಯ ಮೇಲೆ ನಾವು ಹೇಗೆ ಅವಲಂಬಿತರಾಗಿರಬೇಕು ಎಂದು ಈ ವಾಕ್ಯವು ನಮಗೆ ಏನನ್ನು ಹೇಳುತ್ತದೆ?**

ಮಂಗಳವಾರ

ಆಗಸ್ಟ್ 28

## ಥೆಸಲೋನಿಕ ಮತ್ತು ಬೆರೋಯ

ಪೌಲ ಮತ್ತು ಸೀಲರು ಸೆರೆಮನೆಯಿಂದ ಬಿಡುಗಡೆಯಾದಾಗ ಅವರು ಫಿಲಿಪ್ಪಿಯಿಂದ ಹೊರಟುಹೋದರು *(ಅ.ಪೋ.ಕೃ 16:35-40).* ಫಿಲಿಪ್ಪಿಯಿಂದ, ಪೌಲನು ಮತ್ತು ಆತನ ಜೊತೆಗಾರರು ನೇರವಾಗಿ ಮಕ್ಕೆದೊನ್ಯದ ರಾಜಧಾನಿಯಾದ ಥೆಸಲೊನಿಕಕ್ಕೆ ಹೋದರು.

**ಅ.ಪೋ.ಕೃ 17:1-9 ನ್ನು ಓದಿರಿ. ಅನ್ಯರ ಮದ್ಯದಲ್ಲಿ ಪೌಲನು ಮಾಡಿದ ಸುವಾರ್ತೆಯ ಸೇವೆಯನ್ನು ಅಲ್ಲಿದ್ದ ಯೆಹೂದ್ಯ ಕ್ರೈಸ್ತರು ಹೇಗೇ ಸ್ವೀಕಾರ ಮಾಡಿದರು?**

______________________________________________________________________

______________________________________________________________________

ಪೌಲನು ಮತ್ತೊಮ್ಮೆ ಸಭಾಮಂದಿರವನ್ನು ಹುಡುಕಿ ಅಲ್ಲಿ ದೇವರ ವಾಕ್ಯವನ್ನು ಹಂಚಿಕೊಳ್ಳಬೇಕು ಎಂದು ಬಯಸಿದನು. ಅನೇಕ ಗ್ರೀಕರು ಮತ್ತು ಮುಖ್ಯವಾದ ಕೆಲವು ಸ್ತ್ರೀಯರು ಪೌಲನ ಈ ಮಾತುಗಳನ್ನು ನಂಬಿದರು. ಈ ವಿಶ್ವಾಸಿಗಳು ಪೌಲ ಮತ್ತು ಸೀಲರ ಜೊತೆಗೆ ಸೇರಿಕೊಂಡರು *(ಅ.ಪೋ.ಕೃ 17:4)* ಈ ರೀತಿಯಾಗಿ ಅವರು ಸಭಾಮಂದಿರದಿಂದ ಪ್ರತ್ಯೇಕವಾದ ಗುಂಪಾಗಿ ಬೇರ್ಪಟ್ಟರು. ಅವರೆಲ್ಲರೂ ಕೂಡ ಯಾಸೋನನ ಮನೆಯಲ್ಲಿ ಸೇರುತ್ತಿದ್ದರು.

ಪೌಲನ ವಿರೋಧಿಗಳು ಹೊಟ್ಟೆಕಿಚ್ಚಿನಿಂದ ತುಂಬಿದವರಾಗಿ ದಂಗೆಯನ್ನು ಆರಂಭಿಸಿದರು. ಪೌಲ , ತಿಮೋಥಿ ಮತ್ತು ಸೀಲರನ್ನು ಪಟ್ಟಣದ ಸಮಾವೇಶಕ್ಕೆ ಕರೆದುಕೊಂಡು ಬಂದು ಅವರ ಮೇಲೆ ಅಪಾದನೆ ಹೊರಿಸಬೇಕು ಎಂಬುದು ಅವರ ಬಯಕೆಯಾಗಿತ್ತು. ಅವರು ಸುವಾರ್ತಿಕರನ್ನು ಕಂಡುಹಿಡಿಯಲು ಸಾಧ್ಯವಾಗಲಿಲ್ಲ ಆದ್ದರಿಂದ ಯಾಸೋನನನ್ನು ಮತ್ತು ಇತರೆ ಹೊಸ ವಿಶ್ವಾಸಿಗಳನ್ನು ಹೊರಗೆ ಎಳೆದು ಸ್ಥಳೀಯ ನಾಯಕರ ಮುಂದೆ ನಿಲ್ಲಿಸಿ ರಾಜಕೀಯ ದಂಗೆಕೊರರಿಗೆ ಇವರು ಆಶ್ರಯವನ್ನು ಕೊಡುತ್ತಿದ್ದಾರೆ ಎಂದು ಅಪಾದಿಸಿದರು.

**ಅ.ಪೋ.ಕೃ 17:10-15 ನ್ನು ಓದಿರಿ. ಬೆರೋಯದ ಯೆಹೂದ್ಯರು ಥೆಸಲೋನಿಕದವರ ಜೊತೆಗೆ ಹೋಲಿಸಿದರೆ ಅವರು ಏನು ಮಾಡಿದರು?**

______________________________________________________________________

______________________________________________________________________

“ಸದ್ಗುಣವುಳ್ಳವರಾಗಿದ್ದರು” ಎಂಬ ಪದಕ್ಕೆ ಗ್ರೀಕ್ ಭಾಷೆಯಲ್ಲಿ “ಉತ್ತಮ ರೀತಿಯಲ್ಲಿ ಜನಿಸಿದವರು” ಅಥವಾ “ಒಳ್ಳೆಯ ಜನನ” ಎಂಬ ಅರ್ಥಗಳನ್ನು ನೀಡಿದರೂ ಕೂಡ ಅದರ ಭಾವವು “ಒಳ್ಳೆಯ ಮನಸ್ಸುಳ್ಳವರು” ಎಂಬ ಅರ್ಥವನ್ನು ನೀಡುತ್ತದೆ. ಬೆರೋಯದ ವಿಶ್ವಾಸಿಗಳನ್ನು ಸುಮ್ಮನೆ ಅವರು ಪೌಲನು ಹೇಳಿದ್ದನು ಸ್ವೀಕಾರ ಮಾಡಿದರು ಎಂಬ ಒಂದು ಕಾರಣಕ್ಕಾಗಿ ಹೊಗಳಬೇಕಾಗಿಲ್ಲ ಬದಲಿಗೆ ಅವರು ಪೌಲ ಮತ್ತು ಸೀಲರು ಹೇಳಿದ್ದನ್ನು ಕೇಳಿ ಮನೆಗೆ ಹೋಗಿ ಅದು ವಾಕ್ಯದಲ್ಲಿ ಇದೆಯೋ ಅಥವಾ ಇಲ್ಲವೋ ಎಂಬುದಾಗಿ ಪರೀಕ್ಷೆಯನ್ನು ಮಾಡಿ

ನೋಡುತ್ತಿದ್ದರು. ಸುವಾರ್ತೆಗೆ ಸುಮ್ಮನೆ ಮಾನಸಿಕವಾದ ಪ್ರತಿಕ್ರಿಯೆಯನ್ನು ನೀಡುವ ಬದಲು ಅದನ್ನು ಮನಸ್ಸಿನಲ್ಲಿ ಅಂಗಿಕರಿಸದೆ ಹೋದರೆ ಅದು ಕೇವಲ ಕಾಟಾಚಾರದ ವಾಡಿಕೆಯಾಗುತ್ತದೆ.

ಬೆರೋಯದಲ್ಲಿ ಪೌಲನ ಸುವಾರ್ತೆಯು ಫಲ ನೀಡುವ ಮುನ್ನ ಅಲ್ಲಿ ಉಂಟಾದ ತೊಂದರೆಯಿಂದ ಅವರು ದಕ್ಷಿಣಕ್ಕೆ ಪ್ರಯಾಣ ಮಾಡಿ ಅಥೆನ್ಸ್ ನಗರಕ್ಕೆ ಬಂದರು.

**ನೀವು ಕೇಳಿದ ವಾಕ್ಯವು ಸತ್ಯವೇದದಲ್ಲಿ ಇದೆಯೋ ಅಥವಾ ಇಲ್ಲವೋ ಎಂಬುದಾಗಿ ಸತ್ಯವೇದವನ್ನು ಈ ಹಿಂದೆ ಯಾವಾಗ ನೀವು ಹುಡುಕಿದ್ದು ಕೊನೆಯ ಬಾರಿ ಯಾವಾಗ ಜ್ಞಾಪಕ ಮಾಡಿಕೊಳ್ಳಿರಿ?**

**ಬುಧವಾರ** **ಆಗಸ್ಟ್ 29**

## ಅಥೆನ್ಸ್ ನಗರದಲ್ಲಿ ಪೌಲನು

ಪುರಾತನ ಗ್ರೀಕ್ ನಲ್ಲಿ ಅಥೆನ್ಸ್ ಒಂದು ಜ್ಞಾನದ ಕೇಂದ್ರವಾಗಿತ್ತು. ಆದರೆ ಆ ನಗರದ ತುಂಬಾ ವಿಗ್ರಹಾರಾಧನೆ ನಡೆಯುತ್ತಿತ್ತು. ಕಲ್ಲಿನ ಶಿಲ್ಪದಲ್ಲಿ ಕೆತ್ತಿರುವ ಮನುಷ್ಯರ ವಿಗ್ರಹಗಳು ಮತ್ತು ದೇವರ ವಿಗ್ರಹಗಳು ಎಲ್ಲಾ ಕಡೆಗಳಲ್ಲೂ ಕಾಣುತ್ತಿದ್ದವು. ಅದರಲ್ಲೂ ವಿಶೇಷವಾಗಿ ಅರಿಯೋಪಾಗ ಎಂಬ ಮುಖ್ಯ ದ್ವಾರದಲ್ಲಿ ಅನೇಕ ವಿಗ್ರಹಗಳಿದ್ದವು. ಇದು ನಗರ ಕೇಂದ್ರ ಭಾಗವಾಗಿತ್ತು. ಪೌಲನು ಅಲ್ಲಿ ನೋಡಿದ ವಿಗ್ರಹಾರಾಧನೆಯನ್ನು ನೋಡಿ ಬಹಳ ಕೋಪಗೊಂಡನು, ಅವನು ದೇವಾಲಯಕ್ಕೆ ಹೋಗುವ ನಿತ್ಯದ ಪದ್ದತಿಯನ್ನು ಬದಲಾಯಿಸಿ ಎರಡು ವಿಧಾನಗಳನ್ನು ಆಯ್ಕೆ ಮಾಡಿಕೊಂಡನು. ಪ್ರತಿವಾರವು ಯೆಹೂದ್ಯರ ಜೊತೆಗೆ ಸಭಾಮಂದಿರದಲ್ಲಿ ವಾಕ್ಯವನ್ನು ಹಂಚಿಕೊಂಡು ಇತರೆ ದಿನಗಳಲ್ಲಿ ಅನ್ಯರ ಜೊತೆಯಲ್ಲಿ ಮಾರುಕಟ್ಟೆ ಪ್ರದೇಶದಲ್ಲಿ ಮಾತುಕತೆಯಲ್ಲಿ ತೊಡಗಿಕೊಂಡನು.

**ಅ.ಪೋ.ಕೃ 17:22-31 ನ್ನು ಓದಿರಿ. ಅರಿಯೋಪಾಗದ ತನ್ನ ಭಾಷಣದಲ್ಲಿ ಪೌಲನು ಜನರಿಗೆ ರಕ್ಷಣೆಯ ಮತ್ತು ಚರಿತ್ರೆಯ ಹಾಗೂ ಮಾನವತೆಯ ದೇವರ ಕುರಿತಾಗಿ ಏನು ಹೇಳಿದನು?**

____________________________________________________________

____________________________________________________________

ಅಲ್ಲಿ ನೆರೆದಿದ್ದ ಅನ್ಯರಿಗೆ ಪೌಲನ ಮಾತುಗಳು ಹುಚ್ಚುತನದ ಮಾತುಗಳಾಗಿ ಕಾನಿಸುವುದಲ್ಲದೆ ದೇವರು ಮತ್ತು ಧರ್ಮದ ಬಗ್ಗೆ ಅವರಿಗೆ ಇದ್ದ ಅಭಿಪ್ರಾಯವನ್ನು ಕದಲಿಸಿದವು. ಪೌಲನು ಹೇಗೆ ತನ್ನ ಭಾಷಣವನ್ನು ಅಂತ್ಯಗೋಳಿಸಬೇಕು ಎಂದು ಬಯಸಿದನೋ ಗೊತ್ತಿಲ್ಲ, ಆದರೆ ದೇವರು ಲೋಕದ ಮೇಲೆ ನೀಡುವ ತೀರ್ಪಿನ ಕುರಿತಾಗಿ ಅವನು ಹೇಳಿದ ತಕ್ಷಣವೇ ಅವನ ಭಾಷಣವನ್ನು ಅವರು ತಡೆದರು *(ಅ.ಪೋ.ಕೃ 17:31).* ಈ ಮಾತುಗಳು ಗ್ರೀಕ್ ಸಿದ್ದಾಂತಕ್ಕೆ ವಿರುದ್ದವಾಗಿದ್ದವು. ಅವರ ಪ್ರಕಾರ (1) ದೇವರು ಸಂಪೂರ್ಣವಾಗಿ ನಮ್ಮ ಊಹೇ ನಿಲುಕದ ಶಕ್ತಿಯಾಗಿದ್ದಾನೆ ಆತನು ಮಾನವನ ಲೋಕದ ಯಾವುದೇ ವ್ಯವಹಾರಗಳ ಕುರಿತಾಗಿ ತಲೆಕೆಡಿಸಿಕೊಳ್ಳುವುದಿಲ್ಲ

ಮತ್ತು (2) ಒಬ್ಬ ಮನುಷ್ಯನು ಸತ್ತ ಮೇಲೆ ಅವನಿಗೆ ಯಾವುದೇ ರೀತಿಯಲ್ಲಿ ಪುನರುತ್ಥಾನವಿಲ್ಲ. ಈ ಕಾರಣಕ್ಕಾಗಿಯೇ ಸುವಾರ್ತೆಯು ಗ್ರೀಕರಿಗೆ ಹುಚ್ಚುತನವಾಗಿತ್ತು *(1. ಕೊರಿಂಥ 1:2)* ಮತ್ತು ಇದೇ ಕಾರಣಕ್ಕಾಗಿಯೇ ಅಥೆನ್ಸ್ ನಗರದಲ್ಲಿ ಮಾನಸಾಂತರ ಹೊಂದಿದವರ ಸಂಖ್ಯೆ ಬಹಳ ಕಡಿಮೆ.

ಆದರೂ, ಸುವಾರ್ತೆಯನ್ನು ಅಂಗಿಕರಿಸಿದವರಲ್ಲಿ ಅಥೆನ್ಸ್ ನಗರ ಬಹಳ ಪ್ರಮುಖ ವ್ಯಕ್ತಿಗಳಿದ್ದರು ಅವರಲ್ಲಿ ಅರಿಯೋಪಾಗದ ಸದಸ್ಯನಾದ ದಿಯೋನುಸ್ಕನೂ ಮತ್ತು ದಾಮರಿಯೆಂಬಾಕೆಯು ಈಕೆಯ ಹೆಸರು ಸೂಚಿಸುವ ಹಾಗೆ ಈಕೆಯು ಸಮಾಜದ ಉನ್ನತ ವ್ಯಕ್ತಿಯಾಗಿದ್ದಳು. ಈಕೆಯೂ ಕೂಡ ಅರಿಯೋಪಾಗದ ಸದಸ್ಯಳಾಗಿದ್ದಳು. *(ಅ.ಪೋ.ಕೃ 17:34).*

**ಅರಿಯೋಪಾಗದಲ್ಲಿ ಪೌಲನು ಅನುಸರಿಸಿದ ವಿವಿಧ ರೀತಿಯ ಪ್ರಸ್ತಾವನೆಯನ್ನು ಗಮನಿಸಿದಾಗ ಸಾಂಸ್ಕೃತಿಕ ಮತ್ತು ಸಾಮಾಜಿಕ ವ್ಯತ್ಯಾಸಗಳನ್ನು ಅವನು ಹೇಗೆ ಸೂಕ್ಷ್ಮವಾಗಿ ಗಮನಸಿದನು ಎಂದು ತಿಳಿಸುತ್ತದೆ. ಅವನ ಮಾತನ್ನು ದೃಢಪಡಿಸಲು ಅನ್ಯರ ವಾಕ್ಯಗಳನ್ನು ಕೂಡ ಉಲ್ಲೇಖಿಸಿದನು *(ಅ.ಪೋ.ಕೃ 17:28).* ವಿಭಿನ್ನವಾದ ಜನರನ್ನು ತಲುಪಲು ವಿಭಿನ್ನವಾದ ವಿಧಾನಗಳನ್ನು ನಾವು ಹೇಗೆ ಉಪಯೋಗಿಸಬಹುದು ಎಂಬುದನ್ನು ಇದರಿಂದ ನಾವು ಹೇಗೆ ಕಲಿಯಬಹುದು?**

**ಗುರುವಾರ** ಆಗಸ್ಟ್ 30

## ಕೊರಿಂಥದಲ್ಲಿ ಪೌಲನು

ಅ.ಪೋ.ಕೃ 18:1-11 ರಲ್ಲಿ ಪೌಲನು ಕೊರಿಂಥದಲ್ಲಿ ಹೊಂದಿದ ಅನುಭವವನ್ನು ನೋಡುತ್ತೇವೆ. ಅಲ್ಲಿ ಆತನು ಒಂದುವರೆ ವರ್ಷದ ತನಕ ವಾಸಮಾಡಿದನು. ಅಕ್ವಿಲ್ಲ ಮತ್ತು ಪ್ರಿಸ್ಕಿಲ್ಲ ಇಬ್ಬರೂ ಕೂಡ ಪೌಲನ ಜೀವನ ಕಾಲದ ಸ್ನೇಹಿತರಾದರು *(ರೋಮ 16:3, 2 ತಿಮೋಥಿ 4:19).* ಅವರು ಕೊರಿಂಥಕ್ಕೆ ಬರುವ ಮುನ್ನವೆ ಕ್ರೈಸ್ತರಾಗಿದ್ದರು. ರೋಮ್ ಚಕ್ರವರ್ತಿಯು ಕ್ರೈಸ್ತರನ್ನು ಗಡಿಪಾರು ಮಾಡಿದ ಕಾರಣದಿಂದ ಅವರು ರೋಮ್ ಪಟ್ಟಣವನ್ನು ಬಿಟ್ಟು ಬಂದಿದ್ದರು. ಚರಿತ್ರೆಗಾರನಾದ ಸುಯೋಟೋನಸ್ ಹೇಳುವ ಪ್ರಕಾರ ಯೆಹೂದ್ಯರಲ್ಲಿ "ಕ್ರಿಸ್ತನು" ಎಂಬ ವ್ಯಕ್ತಿಯ ಕುರಿತಾಗಿ ಉಂಟಾದ ಗಲಭೆಯಿಂದ ಯೆಹೂದ್ಯರನ್ನು ರೋಮ್ ಸೈನ್ಯವು ಗಡಿಪಾರು ಮಾಡಿತು. ಅಲ್ಲಿದ್ದ ಸ್ಥಳೀಯ ಯೆಹೂದ್ಯರು ಸುವಾರ್ತೆಯನ್ನು ಸಾರಿದ್ದ ಪರಿಣಾಮವಾಗಿ ಈ ಗಲಭೆ ಉಂಟಾಗಿರಬಹುದು. ಆದ್ದರಿಂದ ಅಕ್ವಿಲ್ಲ ಮತ್ತು ಪ್ರಿಸ್ಕಿಲ್ಲ ಇಬ್ಬರೂ ಕೂಡ ಈ ಕಾರ್ಯಗಳಲ್ಲಿ ಭಾಗವಹಿಸಿರುವ ಸಾಧ್ಯತೆ ಜಾಸ್ತಿಯಾಗಿರುತ್ತದೆ. ವಿಷಯ ಏನೇ ಆಗಿದ್ದರೂ ಕೂಡ ಒಂದೇ ವಿಶ್ವಾಸದ ಮೂಲದಿಂದ ಬಂದು ಮತ್ತು ಯೆಹೂದ್ಯ ಹಿನ್ನಲೆಯಿಂದ ಬಂದಿದ್ದರಿಂದ ಪೌಲನು ಮತ್ತು ಅವರು ಒಂದೇ ವೃತ್ತಿಯಲ್ಲಿ ಮುಂದುವರೆದರು.

**ಅ.ಪೋ.ಕೃ 18:4-17 ನ್ನು ಓದಿರಿ. ಕೊರಿಂಥದಲ್ಲಿ ಪೌಲನು ಮಾಡಿದ ಎರಡನೇಯ ಸುವಾರ್ತೆಯ ಪ್ರಯಾಣದ ಫಲಿತಾಂಶವೇನು?**

___________________________________________________________________

___________________________________________________________________

ಪೌಲ ಮತ್ತು ಸೀಲರು ಮೆಕ್ಯದೊನ್ಯದಿಂದ ಬಂದಾಗ ಅಲ್ಲಿರುವ ಸ್ಥಳೀಯ ಸಭೆಗಳಿಂದ ಸ್ವಲ್ಪ ಹಣಕಾಸಿನ ಸಹಾಯವನ್ನು ತಂದಿದ್ದರು. ಇದರಿಂದ ಪೌಲನು ಸಂಪೂರ್ಣವಾಗಿ ಸೇವೆಯಲ್ಲಿ ತೊಡಗಿಸಿಕೊಳ್ಳಲು ಸಹಾಯವಾಯಿತು.ಪೌಲನ ಸಿದ್ದಾಂತವೆಂದರೆ ಸುವಾರ್ತೆಯ ಪ್ರಯಾಣದಲ್ಲಿ ತನ್ನ ಸ್ವಂತ ಖರ್ಚಿನಲ್ಲಿ ಜೀವಿಸುವುದು, ಆತನು "ಸುವಾರ್ತೆಯನ್ನು ಸಾರುವವರು ಸುವಾರ್ತೆಯಿಂದಲೇ ಜೀವನ ಮಾಡಬೇಕೆಂದು ನೇಮಿಸಿದನು" *(1 ಕೊರಿಂಥ 9:14)*.ಎಂದು ಬರೆದರೂ ಕೂಡ ತನ್ನ ನಿಯಮವನ್ನು ತಾನು ಪಾಲಿಸುತ್ತಿದ್ದನು.

ಪೌಲನ ಸಂದೇಶಕ್ಕೆ ಯೆಹೂದ್ಯರು ತೀವ್ರವಾದ ಪ್ರತಿರೋಧವನ್ನು ಒಡ್ಡಿದರು ಕೂಡ ಕೆಲವು ಯೆಹೂದ್ಯರು ಅಂಗಿಕರಿಸಿದರು, ಇವರ ಜೊತೆಗೆ ಅನ್ಯ ದೇವರುಗಳನ್ನು ಪೂಜಿಸುವ ಕೆಲವರು ಕೂಡ ಸುವಾರ್ತೆಯನ್ನು ಅಂಗಿಕರಿಸಿದರು. ಈ ವಿಶ್ವಾಸಿಗಳಲ್ಲಿ ಸಭಾಮಂದಿರದ ನಾಯಕನಾದ ಸೋಸ್ಥೆಯನು ಮತ್ತು ಅವನ ಇಡೀ ಕುಟುಂಬವೇ ಸೇರಿತ್ತು. *(ಅ.ಪೋ.ಕೃ 18:12-17)* ಈತನು ಗಲಭೆಯನ್ನು ಕಂಡು ಭಯಭೀತನಾಗಿದ್ದನು. ಪೌಲನು ಕೊರಿಂಥವನ್ನು ಬಿಟ್ಟುಹೋಗಬೇಕೆಂದು ಆಲೋಚನೆ ಮಾಡುತ್ತಿದ್ದರೂ ಕೂಡ ರಾತ್ರಿ ದರ್ಶನದಲ್ಲಿ ದೇವರು ಅವನು ಅಲ್ಲಿಯೇ ಉಳಿಯುವಂತೆ ಮಾಡಿದನು *(ಅ.ಪೋ.ಕೃ 16:9-11)*.

ಅಂತಿಯೋಕ್ಯಕ್ಕೆ ಹಿಂತಿರುಗುವ ಮಾರ್ಗದಲ್ಲಿ ಪೌಲನು ಅಕ್ವಿಲ್ಲ ಮತ್ತು ಪ್ರಿಸ್ಕಿಲ್ಲ ರನ್ನು ತನ್ನ ಜೊತೆಗೆ ಕರೆದುಕೊಂಡು ಹೋಗಿ ಎಫೆಸದಲ್ಲಿ ಬಿಟ್ಟನು, ಅಲ್ಲಿ ಸ್ವಲ್ಪ ಕಾಲ ಉಳಿದು ಮತ್ತೆ ತನ್ನ ಪ್ರಯಾಣವನ್ನು ಮುಂದುವರೆಸಿದನು. ಅಲ್ಲಿ ಸ್ವಲ್ಪ ಕಾಲದ ನಂತರ ಅಲ್ಲಿರುವ ಸ್ಥಳೀಯ ಸಭೆಯಲ್ಲಿ ಬೋಧಿಸಲು ಅವನಿಗೆ ಅವಕಾಶ ಸಿಕ್ಕಿತು. ಅಲ್ಲಿ ಆತನು ದೇವರ ಚಿತ್ತವಿದ್ದರೆ ಮತ್ತೆ ತಿರುಗಿ ಬರುತ್ತೇನೆ ಎಂದು ಹೇಳಿ ಹೊರಟನು. *(ಅ.ಪೋ.ಕೃ 18:18-21)*. ಇದು ತನ್ನ ಮುಂದಿನ ಪ್ರಯಾಣದಲ್ಲಿ ಸಾಧ್ಯವಾಯಿತು.

**ಪೌಲನು ತನ್ನ ಸ್ವಾಗತದ ಸಮಯದಲ್ಲಿ ನೊಂದುಕೊಂಡು ಅಲ್ಲಿರುವ ಆತ್ಮಗಳ ವಿಷಯದಲ್ಲಿ ದೇವರಿಂದ ಪ್ರೇರಣೆಯನ್ನು ಹೊಂದಲು ಬಯಸಿದನು. ದೇವರು ಅವನಿಗೆ ಹೇಳಿದ ಮಾತುಗಳು ಏನು (ಅ.ಪೋ.ಕೃ 18:10) ಪೌಲನಿಗೆ ಆದ ಅನುಭವವು ಯಾವಾಗಾದರೂ ನಿಮಗೆ ಆಗಿದೆಯೇ?**

**ಶುಕ್ರವಾರ** **ಆಗಸ್ಟ್ 31**

**ಹೆಚ್ಚಿನ ಚಿಂತನೆ:** "ಇಂದಿನ ದಿನಗಳಲ್ಲಿ ತಾವು ಹೋದ ಸ್ಥಳದಲ್ಲಿ ನಾವು ನಂಬಿರುವ ಕ್ರೈಸ್ತರಿಂದ ನಮಗೆ ಸರಿಯಾದ ಅಹ್ವಾನವು ಸಿಗದೇ ಹೋದರೆ ನಿರಾಶೆ ಹೊಂದಬೇಕು ಎಂದು ಆಲೋಸಿಸುವವರು ಪೌಲನು ಮತ್ತು ಆತನ ಜೊತೆಗಾರರು ತಾವು ಹೋದ ಸ್ಥಳದಲ್ಲಿ ಅವರಿಗೆ ಸಿಕ್ಕ ಆಹ್ವಾನದ ಮೂಲಕ ಪಾಠವನ್ನು ಕಲಿಯಬೇಕು. ಶಿಲುಬೆಯನ್ನು ಹೊರುವವರು ಎಚ್ಚರಿಕೆ ಮತ್ತು ಪ್ರಾರ್ಥನೆಯಿಂದ ಮುಂದೆ ಸಾಗಬೇಕು: ಮತ್ತು ನಂಬಿಕೆ ಮತ್ತು ಧೈರ್ಯದಿಂದ ಮುಂದೆ ಸಾಗಬೇಕು. ಅವರು ಯಾವಾಗಲೂ ಕ್ರಿಸ್ತನ ಹೆಸರಿನಲ್ಲಿ ಸೇವೆಯನ್ನು ಮಾಡಬೇಕು. ಎಲೆನ್. ಜಿ ವೈಟ್, *ಅಕ್ಟ್ಸ್ ಆಫ್ ದಿ ಅಪೋಸ್ಟ್ಲ ಸ್.* ಪುಟ 230.

"ಈ ಲೋಕದ ಅಂತಿಮ ದೃಶ್ಯಗಳಲ್ಲಿ ಸತ್ಯವೇದವನ್ನು ದಿನಾಲು ಹುಡುಕುತ್ತಿದ್ದ ಮತ್ತು ಅದನ್ನು ಹೋಲಿಸಿ ನೋಡುವವರಾದ ಬೆರೋಯದವರ ಹಾಗೆ ಸತ್ಯವೇದವನ್ನು ಅಧ್ಯಯನ ಮಾಡುವವರು ಬೇಕಾಗಿದ್ದಾರೆ. ಅಂತಹವರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಿದೆ...."

ಯಾರಿಗೆ ಬೆಳಕನ್ನು ನೀಡಲಾಗಿದೆಯೋ ಅಂತಹವರನ್ನು ದೇವರು ತನ್ನ ರಾಯಭಾರಿಗಳಾಗಿ ಲೋಕಕ್ಕೆ ಕಳುಹಿಸಿಕೊಡುತ್ತಾನೆ, ಮತ್ತು ಅದನ್ನು ಕೇಳಿದವರು ತಾವು ಆ ವಾಕ್ಯವನ್ನು ಯಾವ ರೀತಿಯಲ್ಲಿ ಸ್ವೀಕಾರ ಮಾಡಿದ್ದಾರೆ ಎಂಬುದರ ಕುರಿತಾಗಿ ದೇವರು ಲೆಕ್ಕ ಕೇಳುತ್ತಾನೆ. ಯಾರು ವಾಕ್ಯವನ್ನು ಶ್ರದ್ಧೆಯಿಂದ ಹುಡುಕುವರೋ ಅವರು ದೇವರ ವಾಕ್ಯದ ಬೆಳಕಿನಲ್ಲಿ ಅವರಿಗೆ ನೀಡಿರುವ ಸತ್ಯವನ್ನು ಒರೆಗೆ ಹಚ್ಚಿ ನೋಡುತ್ತಾರೆ.

ಪುಟ 232.

**ಚರ್ಚಿಸಬೇಕಾದ ಪ್ರಶ್ನೆಗಳು**

1. **ಸೋಮವಾರದ ಕೊನೆಯ ಸಾಲುಗಳ ಹಿನ್ನಲೆಯಲ್ಲಿ "ದೀಕ್ಷಾಸ್ನಾನಕ್ಕೆ ಸಿದ್ಧರಾಗುವವರಿಗೆ ಹೆಚ್ಚಿನ ತರಬೇತಿಯನ್ನು ನಿದಬೇಕಾಗುತ್ತದೆ.... "ಸಭೆಗೆ ಹೊಸದಾಗಿ ಬರುವವರಿಗೆ ಕ್ರೈಸ್ತಿಯ ಸಿದ್ಧಾಂತಗಳನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವಂತೆ ಬೋಧನೆ ಮಾಡಬೇಕು." ಎಲೆನ್ ಜಿ. ವೈಟ್, ಸಭೆಗೆ ಸಮಾಲೋಚನೆಗಳು ಸಂಪುಟ 6 ಪುಟ 91, 92. ಈ ಕುರಿತಾಗಿ ನಿಮ್ಮ ತರಗತಿಯಲ್ಲಿ ಚರ್ಚೆ ಮಾಡಿರಿ.**
2. **ಬುಧವಾರದ ಪಾಠದ ಕೊನೆಯ ಪ್ರಶ್ನೆಯನ್ನು ಕುರಿತು ಆಲೋಚಿಸಿರಿ. ಸಾಂಸ್ಕೃತಿಕ ವಿಭಿನ್ನತೆಗಳಿದ್ದರೂ ಕೂಡ ಸುವಾರ್ತೆಯನ್ನು ನಮ್ಮ ಸಮುದಾಯಗಳಿಗೆ ಮಾತ್ರ ಸೀಮಿತವಾಗಿರಿಸದ ಪೌಲನ ಹಾಗೆ ನಾವು ಸಭೆಯಾಗಿ ಜನರನ್ನು ತಲುಪಲು ಯಾವ ಯಾವ ಪ್ರಯತ್ನಗಳನ್ನು ಮಾಡಬಹುದು?**

3. **ಅ.ಪೋ.ಕೃ 17:32-34 ನ್ನು ಓದಿರಿ. ಅಥೆನ್ಸ್ ನಗರದಲ್ಲಿ ಪೌಲನ ಸಂದೇಶಕ್ಕೆ ಬಂದ ಮೂರು ಪ್ರತಿಕ್ರಿಯೆಗಳ ಕುರಿತಾಗಿ ಆಲೋಚಿಸಿರಿ. (1) ಕೆಲವರು ಅದನ್ನು ಅಪಹ್ಯಾಸ ಮಾಡಿದರು. ಅಪರಿಚಿತನಾದ ಯೆಹೂದ್ಯನ ಮಾತುಗಳಿಂದ ಮನೋರಂಜನೆಯನ್ನು ಪಡೆದುಕೊಂಡರು. ಈ ರೀತಿಯ ವಿನೋದವನ್ನು**

ಪಡೆದುಕೊಳ್ಳುವವರ ಜೀವನವು ವಿಷಾದದಲ್ಲಿ ಅಂತ್ಯವಾಗುತ್ತದೆ. (2) ಕೆಲವರು ತಮ್ಮ ನಿರ್ಧಾರಗಳನ್ನು ಮುಂದೂಡಿದರು. ನಾಳಿನ ಕುರಿತಾಗಿ ಮಾತನಾಡುವುದು ಎಷ್ಟು ಸುಲಭವೋ ತೀರ್ಮಾನಗಳನ್ನು ನಾಳೆಗೆ ಮುಂದೂಡುವುದು ಎಷ್ಟು ಕಷ್ಟವಾಗಬಹುದು? (3) ಕೆಲವರು ನಂಬಿದರು. ಮೂರ್ಖನು ದೇವರ ಅವಕಾಶವನ್ನು ಕಳೆದುಕೊಳ್ಳುತ್ತಾನೆ ಎಂದು ಬುದ್ಧಿವಂತನಾದ ಮನುಷ್ಯನಿಗೆ ಮಾತ್ರ ಗೊತ್ತು. ವಿಲಿಯಂ ಬಾರ್ಕ್ಲೆ, *ದಿ ಅಕ್ಟ್ಸ್ ಆಫ್ ಅಪೋಸ್ಟ್ಲ ಸ್* ಪುಟ 133.

4. ಅಥೆನ್ಸ್ ನಗರದಲ್ಲಿ ತನ್ನ ಕೇಳುಗರನ್ನು ಆಕರ್ಷಿಸಲು ಪೌಲನು ಅನ್ಯ ಬರಹಗಾರರ ಬರವಣಿಗೆಗಳನ್ನು ಉಲ್ಲೇಖಿಸಿದನು *(ಅ.ಪೋ.ಕೃ 17:28*). ಬೇರೆಯವರ ಮಾತುಗಳನ್ನು ಉಪಯೋಗಿಸುವುದು ಕೆಲವು ಸಮಯಗಳಲ್ಲಿ ಹೇಗೆ ಸಹಾಯವಾಗಬಹುದು. ಅದೇ ಸಮಯದಲ್ಲಿ ಇದರಲ್ಲಿರುವ ಅಪಾಯಗಳು ಯಾವುವು?